# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 26 Volume 1 Issue 26
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 23-02-2016
MAHILA VISHESHA

ಮೈಸೂರು
ಪುಟ 4
ಬೆಲೆ ₹ 2

## ಮತದಾರರ ದಾಳದ ಮುಂದೆ ಮಂಕಾದ ರಾಜಕೀಯ ಆಟ

ರಾಜ್ಯಾದ್ಯಂತ ನಡೆದ 2016ರ ಜಿ.ಪಂ. ಹಾಗೂ ತಾ.ಪಂ. ಚುನಾವಣೆಯಲ್ಲಿ ರಾಜಕೀಯದವರ ಇಷ್ಟದಂತೆ ಆಟ ನಡೆಯಲಿಲ್ಲ. ಅಂದರೆ ಜನರೇ ನಿರ್ಣಾಯಕ ಅವರ ಮನ ಗೆಲ್ಲಲು ರಾಜಕೀಯ ಪಕ್ಷಗಳು ವಿಫಲವಾಗಿವೆ. ರಾಜಕೀಯ ಪಕ್ಷಗಳು ಏನು ಹೇಳಬೇಕು ಅದನ್ನು ನೇರವಾಗಿ ತಲುಪಿಸಿದರೆ ಅವರ ದಾಳದ ಆಟ ನಿಮ್ಮ ಮನದಲ್ಲಿರುತ್ತದೆ. ಆಡುವ ಮಾತು ನೇರವಾಗಿರಬೇಕೆಂದು ಹಾಗೂ ಬೇರೆಯವರ ಮನಸ್ಸಿಗೆ ನೋವಾಗದಂತೆ ಇದ್ದು ಆಡಿದ ಮಾತು ಉಳಿಯಬೇಕು ಹಾಗಾದಲ್ಲಿ ಜನಪ್ರತಿನಿಧಿಗಳು ಕ್ಷೇತ್ರಗಳಲ್ಲಿ ದೇವರುಗಳು ಇದ್ದಂತೆ.


ಡಾ. ಪುಷ್ಪವತಿ ಅಮರನಾಥ್
ಮೈಸೂರು ಜಿ.ಪಂ


ಭವಾನಿ
ಹಾಸನ ಜಿ.ಪಂ


ಅನುಪಮಾಕುಮಾರಿ
ಮಂಡ್ಯ ಜಿ.ಪಂ


ಇಶ್ರತ್ ಭಾನು
ಚಾ. ನಗರ ಜಿ.ಪಂ


ಸರಿತಾ ಪೂಣಚ್ಚ
ಕೊಡಗು ಜಿ.ಪಂ


ಮಧು ಸುಬ್ಬಣ್ಣ
ಕಳಲೆ ಜಿ.ಪಂ ಕ್ಷೇತ್ರ

ಮಹಿಳಾ ಅಭ್ಯರ್ಥಿಗಳು ಎಲ್ಲಾ ಜಿಲ್ಲೆಗಳಲ್ಲಿ ವಿವಿಧ ಪಕ್ಷಗಳಿಂದ ಹಲವಾರು ಕ್ಷೇತ್ರಗಳಲ್ಲಿ ಚುನಾಯಿತರಾಗಿರುವುದು ಹೆಮ್ಮೆಯ ಸಂಗತಿ. ನಿಮ್ಮ ಆಯ್ಕೆ ಸುಭದ್ರವಾಗಿಡಲು ನೀವೂ ಆಡುವ ಮಾತು ಹಾಗು ನೀವು ಮಾಡುವ ಕೆಲಸದ ಮೇಲೆ ಅವಲಂಭಿರುತ್ತವೆ. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳಲ್ಲಿ ಶೇಕಡಾ 50ಕ್ಕೂ ಹೆಚ್ಚು ವಿಜೇತರಾಗಿರುವವರು ಮಹಿಳೆಯರೇ ಆದ್ದರಿಂದ ನಿಮ್ಮ ಹೆಚ್ಚಿನ ಜವಾಬ್ದಾರಿ ಇರುತ್ತದೆ. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿಕೊಟ್ಟು ನಿಮ್ಮ ಮತದಾರರ ಪ್ರೀತಿ ಪಾತ್ರರಾಗಿರಿ. ಇದು ನಿಮಗೆ ಒಳ್ಳೆಯ ಬೆಳವಣಿಗೆಯಾಗುತ್ತದೆ. ರಾಜ್ಯದ ಎಲ್ಲಾ ಕ್ಷೇತ್ರಗಳಿಂದ ಚುನಾಯಿತರಾಗಿರುವ ಮಹಿಳಾ ಜನಪ್ರತಿನಿಧಿಗಳಿಗೆ ಮಹಿಳಾ ವಿಶೇಷ ಬಳಗದಿಂದ ಹಾರ್ಧಿಕ ಶುಭಾಷಯಗಳು.

**ಚುನಾವಣಾ ಫಲಿತಾಂಶದ ವಿವರ**
**ಕೆಲವು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಪಕ್ಷಿ ನೋಟ**

| ಜಿಲ್ಲೆ | ಒಟ್ಟು ಸ್ಥಾನ | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಇತರೆ | ಒಟ್ಟು ತಾ.ಪ. | ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಅತಂತ್ರ |
|---|---|---|---|---|---|---|---|---|---|---|
| ಮೈಸೂರು | 49 | 8 | 22 | 18 | 1 | 7 | 0 | 2 | 2 | 3 |
| ಕೊಡಗು | 29 | 18 | 10 | 1 | 0 | 3 | 3 | 0 | 0 | 0 |
| ಚಾಮರಾಜನಗರ | 23 | 9 | 14 | 0 | 0 | 4 | 1 | 3 | 0 | 0 |
| ಮಂಡ್ಯ | 41 | 0 | 13 | 27 | 1 | 7 | 0 | 1 | 5 | 1 |
| ರಾಮನಗರ | 22 | 0 | 16 | 6 | 0 | 4 | 0 | 2 | 2 | 0 |
| ಬೆಂಗಳೂರು ನ. | 50 | 23 | 21 | 5 | 1 | 4 | 3 | 0 | 0 | 1 |
| ಬೆಂಗಳೂರು ಗ್ರಾ. | 21 | 3 | 13 | 5 | 0 | 4 | 0 | 3 | 0 | 1 |
| ಹಾಸನ | 40 | 1 | 16 | 23 | 0 | 8 | 0 | 2 | 5 | 1 |

## ವಾಜಪೇಯಿ ನಗರ ವಸತಿ ಯೋಜನೆ



ಮೈಸೂರು ಮಹಾನಗರಪಾಲಿಕೆಯು ನಾಲ್ಕು ವಿಧಾನ ಕ್ಷೇತ್ರಗಳ ವ್ಯಾಪ್ತಿಯಲ್ಲಿ ವಾಸಿಸುವ ಬಡವರು ವಾಜಪೇಯಿ ನಗರ ವಸತಿ ಯೋಜನೆಗೆ ಅರ್ಜಿ ಸಲ್ಲಿಸಬಹುದೆಂದು ಮಹಾನಗರಪಾಲಿಕೆ ತಿಳಿಸುತ್ತಾ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲೂ 200 ಮನೆಗಳನ್ನು ವಿತರಿಸಲು ಮುಂದೆ ಬಂದಿದ್ದು ಸಹಾಯ ಧನ ಇತ್ಯಾದಿ ಸೌಲಭ್ಯಗಳು ದೊರೆಯುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮೈಸೂರು ನಗರಮಹಾಪಾಲಿಕೆ ಕಛೇರಿಯಲ್ಲಿ ಪಡೆಯಬಹುದೆಂದು ಅಲ್ಲದೆ ಅರ್ಜಿ ಸಲ್ಲಿಸಲು 25.02.2016 ಕೊನೆಯ ದಿವಸವಾಗಿರುತ್ತದೆ.

## ಮಂಗಳಮುಖಿ ಕೆ. ಪ್ರತೀಕಯಾಶೀನಿ ಈಗ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್



ತಮಿಳುನಾಡಿನ ಹೈಕೋರ್ಟ್ ನೀಡಿದ ತೀರ್ಪಿನ ಪ್ರಕಾರ ಹಾಗೂ ಸರ್ಕಾರಕ್ಕೆ ನೀಡಿದ ಸೂಚನೆಯ ಮೇರೆಗೆ ಚೆನ್ನೈ ಪೋಲಿಸ್ ಕಮೀಷನರ್ ಮಂಗಳಮುಖಿ ಕೆ. ಪ್ರತೀಕಯಾಶೀನಿ ಹಾಗೂ ಇತರೆ 21 ಮಂಗಳ ಮುಖಿಯರಿಗೆ ಸಬ್‌ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡಲು ನೇಮಕಾತಿ ಮಾಡಿದ್ದಾರೆ. ವಿದ್ಯಾಭ್ಯಾಸ ಮತ್ತು ನೌಕರಿ ಸಿಗುವ ವಿಚಾರದಲ್ಲಿ ಕಾರ್ಯಮುಖಿವಾಗಿರುವುದಲ್ಲದೆ ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಲೈಂಗಿಕ ದೌರ್ಜನ್ಯದ ಎದುರು ಹೋರಾಡುತ್ತೇನೆಂದು ಮಾಧ್ಯಮಗಳಿಗೆ ಪ್ರೀತಿಕಾ ಅವರು ತಿಳಿಸಿದ್ದಾರೆ.

## ವೃದ್ಧರಿಗೆ ಅಮ್ಮಾ ಕೊಡುಗೆ



60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಚೆನ್ನೈನಗರ ಸಾರಿಗೆ ಬಸ್ಸುಗಳಲ್ಲಿ ಉಚಿತ ಪ್ರಯಾಣದ ಕೊಡುಗೆ ಯನ್ನು ತಮಿಳುನಾಡು ಸಿಎಂ ಜಯಲಲಿತಾ ಘೋಷಿಸಿದ್ದಾರೆ. ಜಯಲಲಿತಾರವರ ಜನ್ಮದಿನವಾದ ಫೆ. 24 ರಿಂದ ಈ ಯೋಜನೆ ಜಾರಿಗೆ ಬರಲಿದೆ ಎಂದು ಜಯಲಲಿತಾ ತಿಳಿಸಿದರು.

## ವಿಸಿಗಳಿಗೂ ಸ್ಮೃತಿ ಶಿಸ್ತುಪಾಠ



ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಕುಲಪತಿಗಳಿಗೂ ಸಚಿವೆ ಸ್ಮೃತಿ ಇರಾನಿ ಶಿಸ್ತು ಪಾಠ ಕಲಿಸಿದ ಘಟನೆ ಗುರುವಾರದ ಸಭೆಯಲ್ಲಿ ನಡೆದಿದೆ. ಹರಿಯಾಣದ ಸೂರಜ್ ಕುಂಡ್‌ನಲ್ಲಿ ನಡೆದ ಸಭೆಯಲ್ಲಿ ವಿದ್ಯಾರ್ಥಿಗಳ ಅಶಿಸ್ತು ನಿಯಂತ್ರಿಸುವ ಬಗ್ಗೆ ಕ್ರಮ ಕೈಗೊಳ್ಳದ್ದಕ್ಕೆ 42 ವಿವಿಗಳ ಕುಲಪತಿಗಳನ್ನು ತರಾಟೆಗೆ ತೆಗೆದುಕೊಂಡರು. ಸಭೆಯಲ್ಲಿ ತೂಕಡಿಸಿದ ಇಬ್ಬರು ಕುಲಪತಿಗಳಿಗೆ ಎಚ್ಚರಿಕೆ ನೀಡಿದರು. ಜೆಎನ್‌ಯು, ಜಾಧವ್‌ಪುರ ಮತ್ತು ಹೈದರಾಬಾದ್ ವಿವಿಗಳ ಕುಲಪತಿಗಳನ್ನು ತರಾಟೆಗೆ ತೆಗೆದುಕೊಂಡ ಸ್ಮೃತಿ ಇರಾನಿ, ನೀವೆಲ್ಲ ತೆರಿಗೆದಾರರ ಹಣದಲ್ಲಿ ಬದುಕುತ್ತೀರಿ ಎಂಬುದನ್ನು ಮರೆಯಬೇಡಿ ಎಂದರು.

## ಬಿಸಿಯೂಟ ಕಾರ್ಯಕರ್ತೆ ಈಗ ಜಿ.ಪಂ. ಸದಸ್ಯೆ

ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಜಿಲ್ಲಾ ಪಂಚಾಯಿತಿ ಕ್ಷೇತ್ರದ ಅಮಿತಾಮುತ್ತಪ್ಪ ಆಯ್ಕೆಯಾದ ಬಿಸಿಯೂಟ ಕಾರ್ಯಕರ್ತೆಯಾಗಿದ್ದು, ಕಳೆದ ಹನ್ನೆರಡು ವರ್ಷಗಳಿಂದ ಉದುಸೆ ದಿಣ್ಣೆಕೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ಕಾರ್ಯಕರ್ತೆ ಯಾಗಿ ಸೇವೆ ಸಲ್ಲಿಸುತ್ತಿದ್ದರು.

## ಎಂಜಿನಿಯರ್ ಈಗ ಜಿ.ಪಂ. ಸದಸ್ಯೆ

ತಾಲ್ಲೂಕಿನ ಕಂಪ್ಲಿ(ಮಂಚಿಕೇರಿ)ಜಿಲ್ಲಾ ಪಂಚಾಯ್ತಿ ಕ್ಷೇತ್ರದಲ್ಲಿ ವಿಜೇತರಾದ ಬಿಜೆಪಿ ಅಭ್ಯರ್ಥಿ ರೂಪಾ ಬೂರ್ನಮನೆ ಎಂಜಿನಿಯರಿಂಗ್ ಪದವೀಧರೆ.

ಸಮಾಜ ಸೇವೆ ಮಾಡಬೇಕೆನ್ನುವ ಹಂಬಲದಿಂದ ರಾಜಕೀಯಕ್ಕೆ ಬಂದೆ. ಪತಿ ಗಜಾನನ ಅವರು ಬೆಂಬಲವನ್ನು ನೀಡಿದರು. ಕ್ಷೇತ್ರದ ಮೂಲ ಸೌಕರ್ಯಕ್ಕೆ ಒತ್ತು, ಗ್ರಾಮೀಣಾ ಅಭಿವೃದ್ಧಿಗೆ ಆದ್ಯತೆ, ನೀಡುತ್ತೇನೆ ಎಂದು ತಿಳಿಸಿದರು.

## ವೀರಶೈವ ವಧು-ವರರ ಮುಖಾಮುಖಿ ಸಮಾವೇಶ

ಬೆಂಗಳೂರಿನ ಲಿಂಗಾಯಿತ ಕಲ್ಯಾಣ ಟ್ರಸ್ಟ್ ವತಿಯಿಂದ ವೀರಶೈವ ವಧು-ವರರ 166ನೇ ಮಾಸಿಕ ಮುಖಾಮುಖಿ ಸಮಾವೇಶವನ್ನು ಫೆ. 28ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದೆ. ಇಚ್ಛೆಯುಳ್ಳ ವಧು-ವರರು ಮತ್ತು ಪೋಷಕರು ಸಮಾವೇಶದಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ದೂ. 080-22269237 ಸಂಪರ್ಕಿಸಿ.

## ಡಾ. ಪುಷ್ಪಾವತಿ ಅಮರನಾಥ್ ಮರು ಆಯ್ಕೆ



ಡಾ. ಪುಷ್ಪಾವತಿ ಅಮರನಾಥ್ ಮೈಸೂರು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷಿಣಿಯಾಗಿ ಕಾರ್ಯನಿರ್ವಹಿಸಿದ್ದು ಈಗ 2016ರ ಚುನಾವಣೆಯಲ್ಲೂ ಬನ್ನಿಕುಪ್ಪೆ ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಸ್ಪರ್ಧಿಸಿ ಜಯಶೀಲ ರಾಗಿರುತ್ತಾರೆ. ಇವರ ಜಯಕ್ಕೆ ಅಧ್ಯಕ್ಷಿಣಿಯ ಅವಧಿಯಲ್ಲಿ ಜನಾರುರಾಗಿ ಮಾಡಿದ ಕೆಲಸಗಳು ಹಾಗೂ ಅವರ ನಿರ್ಮಲ ಮನಸ್ಸಿನ ಮನೋಭಾವವೇ ಕಾರಣ.

## ಸರಳ ಮದುವೆಯಿಂದ ರೈತರಿಗೆ ಸಹಾಯ ಮಾಡಿದ ಕುಟುಂಬ



ಮಹಾರಾಷ್ಟ್ರದ ಥಾಣೆ ನಿವಾಸಿ 59 ನಿವಾಸಿ ವಿವೇಕ್‌ವಾಡ್ಕೆ ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದು ಮಗಳ ಮದುವೆಯನ್ನು ಅದ್ದೂರಿ ಯಾಗಿ ಮಾಡದೇ ಖರ್ಚು ಕಡಿಮೆ ಮಾಡಿ ಬರಪೀಡಿತ ರೈತರಿಗೆ 6 ಲಕ್ಷ ರೂಪಾಯಿ ಯನ್ನು ಸಹಾಯ ಮಾಡುವ ಮೂಲಕ ಅವರ ವ್ಯಕ್ತತ್ವ ಎಂತಹದು ಎಂದು ಬೇರೆಯವರಿಗೆ ಮಾದರಿಯಾಗಿದ್ದಾರೆ. ಇವರ ಪತ್ನಿ ವಾಸಂತಿಯವರಿಗೆ ಸಾಮಾಜಿಕ ಕಾರ್ಯಗಳೆಂದರೆ ಬಲು ಇಷ್ಟ. ಅದ್ದರಿಂದ ಕೈಲಾದ ಸಹಾಯ ಮಾಡಿರುತ್ತೇವೆ ಅನ್ನುತ್ತಾರೆ ವಿವೇಕ ಕುಟುಂಬ.

ಸಿಇಟಿ ತರಬೇತಿ
ಮೈಸೂರು ಸರಸ್ವತಿಪುರಂನಲ್ಲಿರುವ ಲಲಿತಾ ಅಕಾಡೆಮಿ ವತಿಯಿಂದ ಕ್ರಾಷ್ ಕೋರ್ಸ್, ಪಿಯು ಸಿಇಟಿ ತರಗತಿಗಳನ್ನು ಮಾ. 30 ರಿಂದ ಹಮ್ಮಿಕೊಳ್ಳಲಾಗಿದೆ. ಇಚ್ಚಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ಮೊ : 9379777793 ಸಂಪರ್ಕಿಸಬಹುದು.


ಇತ್ತೀಚೆಗೆ ನಡೆದ ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಬನ್ನಿ ಮಹಾಕಾಳಿದೇವಿ ಜಾತ್ರಾ ಮಹೋತ್ಸವದಲ್ಲಿ ಭಕ್ತರು ನೆರೆದಿರುವ ದೃಶ್ಯ.


ಬನಶಂಕರಿ ಸಾಮೂಹಿಕ ವಿವಾಹ ವೇದಿಕೆವತಿಯಿಂದ ನಡೆದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಎಂಎಲ್‌ಸಿ ತಾರಾರವರು ಭಾಗವಹಿಸಿರುವ ಚಿತ್ರ.ಮಹಿಳಾ ತಂಡ


ಉಪ ಚುನಾವಣೆಯಲ್ಲಿ ಹೆಬ್ಬಾಲ್ ಕ್ಷೇತ್ರದಲ್ಲಿ ಗೆದ್ದ ಬಿಜೆಪಿ ಅಭ್ಯರ್ಥಿ ನಾರಾಯಣಸ್ವಾಮಿಗೆ ಮಗಳಿಂದ ಮುತ್ತಿನ ಅಭಿನಂದನೆಗಳು

## ಚಿತ್ರ ಸುದ್ದಿ – ಚಿತ್ರವನ್ನು ನೋಡಿ ಆನಂದಿಸಿ



ಫರಿದಾಬಾದ್‌ನಲ್ಲಿ 30ನೇ ಅಂತರರಾಷ್ಟ್ರೀಯ ಸೂರಜ್ ಕುಂಡ ಕ್ರಾಫ್ಟ್‌ಮೇಳದಲ್ಲಿ ಹರಿಯಾಣದ ಕಲಾವಿದರು



ಪತಂಜಲಿ ಯೋಗ ಶಿಕ್ಷಣ ಸಮಿತಿ ಮಂಗಳೂರಿನಲ್ಲಿ ರಥಸಪ್ತಮಿ ಪ್ರಯುಕ್ತ ಸೂರ್ಯ ನಮಸ್ಕಾರ ಆಯೋಜಿಸಿತ್ತು.



ಕಾಲೇಜಿನಲ್ಲಿ ಪಾಠ ಮುಗಿದಿದೆ ಮುಂದೆ ಪರೀಕ್ಷೆಗೆ ಏನು ಮಾಡಬೇಕೆಂದು ಚರ್ಚೆಯಲ್ಲಿರುವ ವಿದ್ಯಾರ್ಥಿಗಳು.



ಶೀಘ್ರವೇ ನಡೆಯುವ ಡಿಎವಿ ವಿದ್ಯಾರ್ಥಿಗಳ ಕಾರ್ಯಕ್ರಮದ ಪ್ರಚಾರಕ್ಕಾಗಿ ಪಂಜಾಬ್ ವಿವಿ ವಿದ್ಯಾರ್ಥಿಗಳು ಚಂಡೀಗಡದಲ್ಲಿ ಫ್ಲಾಷ್ ಮಾಬ್ ಆಯೋಜಿಸಿದ್ದರು.



ವಿಜಯಪುರ ಜಿಲ್ಲೆಯಲ್ಲಿರುವ ಆಲಮಟ್ಟಿ ಜಲಾಶಯದಲ್ಲಿ ಬತ್ತಿ ಹೋಗಿರುವ ನೀರಿನ ದೃಶ್ಯ.



**ಚಳಿಗಾಲದಿಂದ ಹೊರಬಂದ ಸ್ನೇಹ ವೃಂದ**

ಕಾಲೇಜು ಸೆಮಿಸ್ಟರ್ ಪರೀಕ್ಷೆಗಳನ್ನು ಮುಗಿಸಿದ್ದರ ಜೊತೆಗೆ ಚಳಿಗಾಲದಿಂದ ಹೊರಬಂದ ಸ್ನೇಹಿತಿಯರುಗಳು ಖುಷಿಯಿಂದ ವಾತಾವರಣ ಹಾಗು ಪರಿಸರದ ಸ್ವಾದವನ್ನು ಸವಿಯುತ್ತಿರುವುದು. ಆ ಸಂಭ್ರಮಕ್ಕೆ ಯಾವುದೇ ಅಡೆತಡೆಯ ಸಾಟಿಯೇ ಇಲ್ಲವೆಂದು ಗೋಚರಿಸುವಂತೆ ಇದೆ.

## ಹಿಂಗೆ ಕುಳಿತರೆ ಹೆಂಗೆ



ಜೀವನವೆಂಬುದು ಒಂದು ಮಹಾಸಾಗರ. ಮುನಿಸ, ಕೋಪ, ಬೇಜಾರುಗಳಿಂದ ಪ್ರಯೋಜನವಿಲ್ಲ ಹೊಂದಾಣಿಕೆಯಿಂದ ಜೀವನ ಸುಖಮಯ



ರಾಯಚೂರು ಜಿಲ್ಲೆ ಲಿಂಗಸೂರು ತಾಲ್ಲುಕಿನಲ್ಲಿ ಜಿ.ಪಂ. ಹಾಗೂ ತಾ.ಪಂ. ಚುನಾವಣಾ ಕಾರ್ಯಕ್ಕೆ ಭಾಗಿಯಾಗಿರುವ ನೌಕರರು ಮಗುವೊಂದಿಗೆ ಇರುವ ಮಹಿಳೆಯನ್ನು ರಿಸರ್ವ್‌ನಲ್ಲಿಡಬಹುದಿತ್ತಲ್ಲವೇ.



ಚೆನ್ನೈನ ಮೇರಿನಾ ಬೀಚ್‌ನಲ್ಲಿ ಮರಳು ಕಲಾಕೃತಿಗಾರ ಆಮೆಯ ಚಿತ್ರವನ್ನು ಬಿಡಿಸುತ್ತಿರುವ ಚಿತ್ರದ ಒಳಅರ್ಥ ಏನೆಂದರೆ ಆಮೆಯನ್ನು ಉಳಿಸಿ ಎಂದಂತೆ ಕಾಣುತ್ತಿದೆ. ಮೇರಿನಾ ಬೀಚ್‌ಗೆ ಬರುವ ಪ್ರವಾಸಿಗರು ಹಾಗೂ ಮೀನುಗಾರರು ಸ್ಥಳೀಯರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದರೆ ಆಮೆಯ ಅಳಿವು ಉಳಿಯುತ್ತದೆ.

ಇದು ನಿಮ್ಮ ಮಹಿಳಾ ಪತ್ರಿಕೆ ಪ್ರೋತ್ಸಾಹಿಸಿ
Email :mahilavishesha@yahoo.com
web :www.mahilavishesha.in



ನಿಮ್ಮ ರಕ್ಷಣೆ ನಿಮ್ಮ ಕೈಯಲ್ಲೇ ಇದೆ. ಕಾನೂನುನನ್ನು ಪಾಲಿಸಿ, ಹಾಗೆಯೇ ನಿಯಾಮವನ್ನು ಪಾಲಿಸಿ ಹೆಲ್ಮಟ್ ಕಡ್ಡಾಯ ನಿಮಗೆ ಖಜ್ಜಾಯ




## ಶೀತಲ್ ವೆಡ್ಸ್ ರಾಬಿನ್



ರಾಜ್ಯದ ಮಹಿಳಾ ಕ್ರೀಡಾಪಟು ಶೀತಲ್ ಗೋಯೆಲ್ ರಾಷ್ಟ್ರ ಕ್ರಿಕೆಟಿಗ ರಾಬಿನ್ ಉತ್ತಪ್ಪರವರನ್ನು ಮಾರ್ಚ್ 3ರಂದು ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ವಿವಾಹವಾಗಲಿದ್ದಾರೆ. ಸ್ಟಾರ್ ಆಟಗಾರರು ಹಾಗೂ ರಾಜಕೀಯ ಮುಖಂಡರು ವಿವಾಹಕ್ಕೆ ಆಗಮಿಸಿ ಮೆರಗನ್ನು ನೀಡುವವರಿದ್ದಾರೆ. ಗೆಳತನದಿಂದಿ ಸ್ನೇಹ, ಸ್ನೇಹದಿಂದ ಪ್ರೀತಿ, ಪ್ರೀತಿಯಿಂದ ವಿವಾಹವಾಗುತ್ತಿರುವ ಶೀತಲ್ ರಾಬಿನ್ ಜೋಡಿಯು ಸಂತೋಷ ಹಾಗೂ ನೆಮ್ಮದಿಯಿಂದ ನೂರು ಕಾಲ ಬಾಳಲಿ ಎಂದು ಮಾವಿ ಬಳಗ ಶುಭವನ್ನು ಕೋರಿದೆ.

## ಸತತ 40ನೇ ಪಂದ್ಯವನ್ನು ಗೆದ್ದ ಸಾನಿಯಾ ಹಿಂಗಿಸ್ ಜೋಡಿ



ಸಾನಿಯಾ ಹಿಂಗಿಸ್ ಜೋಡಿ ಸತತವಾಗಿ 40ನೇ ಆಟವನ್ನು ಗೆದ್ದು ಇತ್ತೀಚೆಗೆ ರಷ್ಯಾದಲ್ಲಿ ನಡೆದ ಸೆಂಟ್‌ಫಿಟ್ಸ್‌ಬರ್ಗ್‌ನಲ್ಲಿ ಟ್ರೋಫಿಯನ್ನು ಸಂಭ್ರದಿಂದ ಪಡೆದುಕೊಂಡು ಖುಷಿಯಿಂದಿರುವುದು.

## ಏಷ್ಯನ್ ಕ್ರೀಡಾಕೂಟದ ಖೋ ಖೋ ಸ್ಪರ್ಧೆಯಲ್ಲಿ ಸ್ವರ್ಣ ಗೆದ್ದ ಭಾರತ

12ನೇ ವರ್ಷದ ಏಷ್ಯನ್ ಕ್ರೀಡಾಕೂಟ ಗೌಹಾತಿ ಹಾಗೂ ಸಿಲಾಂಗ್‌ನಲ್ಲಿ ನಡೆದಿದ್ದು ಮಹಿಳಾ ಖೋ ಖೋ ಸ್ಪರ್ಧೆಯಲ್ಲಿ ಭಾರತ ತಂಡ ಸ್ವರ್ಣ ಪದಕವನ್ನು ಗಳಿಸಿದೆ. ಭಾರತ ತಂಡದಲ್ಲಿ ಆಡಿದ ಕುಮಾರಿ ಮೇಘ ಕೆ.ಎಸ್. ಮತ್ತು ವೀಣಾ ಎಂ ರವರು ಮೈಸೂರು ಜಿಲ್ಲೆಯವರಾಗಿರುತ್ತಾರೆ. ಇವರಿಬ್ಬರು ಮೈಸೂರು ಜಿಲ್ಲೆ ಟಿ. ನರಸೀಪುರ ತಾ. ಕುರುಬನೂರು ಗ್ರಾಮೀಣಾ ಪ್ರದೇಶದ ಕೃಷಿಕ ಕುಟುಂಬದವರಾಗಿದ್ದು ವಿದ್ಯೋದಯ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದು ಆಟದ ಜೊತೆಗೆ ಪಾಠದ ಕಡೆಗೂ ಗಮನವನ್ನು ಇಟ್ಟಿದ್ದಾರೆ.



ಕೃಷಿಕ ಕುಟುಂಬದಿಂದ ಇವರಿಬ್ಬರು ಬಂದಿದ್ದವರಾಗಿದ್ದು ತಮ್ಮ ಪ್ರತಿಭೆಯಿಂದ ತಮ್ಮ ಶಾಲೆ ತಮ್ಮ ಊರು ತಮ್ಮ ಕುಟುಂಬ ತಮ್ಮ ತಾಲ್ಲೂಕು, ಜಿಲ್ಲೆ, ರಾಜ್ಯ ಹಾಗು ರಾಷ್ಟ್ರಕ್ಕೆ ಗೌರವವನ್ನು ತಂದಿರುವುದಲ್ಲದೆ ಅಂತರರಾಷ್ಟ್ರಿಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಈ ಇಬ್ಬರು ಪ್ರತಿಭೆಗೂ ಏರ್‌ಫೋರ್ಟ್ ಇಂಡಿಯಾ ತಾತ್ಕಾಲಿಕವಾಗಿ ಕೆಲಸವನ್ನು ನೀಡಿ ರೂ. 25,000 ವೇತನವನ್ನು ನೀಡುತ್ತಿದ್ದು ವ್ಯಾಸಂಗಕ್ಕೆ ಹಾಗೂ ಕ್ರೀಡಾ ಪ್ರೋತ್ಸಾಹಕ್ಕೆ ನೇರವಾಗುತ್ತಾರೆ. ಇವರಿಬ್ಬರ ಆಟ ಪಾಠ ಎರಡು ಮುಂದುವರಿಯಲಿ ಹಾಗೂ ಎಲ್ಲಾ ಯಶಸ್ಸುಗಳು ದೊರೆಯಲಿ ಮಾವಿ ಬಳಗ ಆಶಿಸುತ್ತದೆ.



ಇತ್ತೀಚೆಗೆ ಬಿಡುಗಡೆಯಾದ ಕನ್ನಡ ಚಲನಚಿತ್ರ ಶಿವಲಿಂಗದಲ್ಲಿ ಬರುವ ಒಂದು ದೃಶ್ಯ.

## ಅಮ್ಮಾಗೆ ಹುಟ್ಟು ಹಬ್ಬದ ಶುಭಾಷಯಗಳು



ಎಐಎಡಿಎಂಕೆ ಅಧ್ಯಕ್ಷೆ ಹಾಗೂ ತಮಿಳುನಾಡಿನ ಜನಪ್ರಿಯ ಮುಖ್ಯಮಂತ್ರಿ ಜಯಲಲಿತಾರವರು




ತಮಿಳುನಾಡಿನ ಜನಕ್ಕೆ ಅಮ್ಮಾ ಆಗಿರುವ ಮುಖ್ಯಮಂತ್ರಿ ಜಯಲಲಿತಾರವರ ಹುಟ್ಟು ಹಬ್ಬಕ್ಕೆ ಮೈಸೂರಿನ ಚಾಮುಂಡೇಶ್ವರಿದೇವಿ ಇನ್ನು ಹೆಚ್ಚಿನ ಆಯುರಾರೋಗ್ಯ ಐಶ್ವರ್ಯ ಕರುಣಿಸಲಿ ಹಾಗೂ ಮುಂಬರುವ ವಿಧಾನಸಭಾ ಚುನಾವಣೆ ಯಲ್ಲಿ ಪಕ್ಷವು ಅಮೋಘ ಗೆಲುವುವನ್ನು ಸಾಧಿಸಿ ಮತ್ತೊಮ್ಮೆ ಮುಖ್ಯಮಂತ್ರಿ ಸ್ಥಾನವನ್ನು ಪಡೆದು ಇನ್ನೂ ಹಲವಾರು ಯೋಜನೆಗಳನ್ನು ನಾಡಿನ ಜನತೆ ನೀಡಿಲಿ ಎಂಬುದು ಮಹಾದಾಸೆ.




ಫೆ. 12ರಿಂದ ಅವಿವಾಹಿತ ಮಹಿಳೆಯರು ಮೊಬೈಲ್ ಬಳಕೆಯನ್ನು ಮಹ್‌ಸಾನಾ ಜಿಲ್ಲೆ ದಿಕ್ತಾತ್ ಖಾಪ್ ಪಂಚಾಯಿತಿ ವ್ಯಾಪ್ತಿಯ ಗ್ರಾಮದಲ್ಲಿ ನಿಷೇಧಿಸಲಾಗಿದೆ ಬಳಸಿದರೆ ರೂ. 2500 ದಂಡ ಹಾಗೂ ಮಾಹಿತಿ ನೀಡಿದವರಿಗೆ ರೂ. 200 ಬಹುಮಾನ ಎಂದು ಠಾಗೂರ್ ಸಮುದಾಯವು ತಿಳಿಸಿದೆ. ಇದಕ್ಕೆ ಇತರೆ ಜನಾಂಗವೂ ಸಹ ಸಾಥ್ ನೀಡಿದೆ. ಇದರ ಉದ್ದೇಶ ಓದಿನ ಕಡೆಗೆ ಹೆಚ್ಚು ಗಮನ ನೀಡಲಿ ಎಂಬುದಾಗಿದೆ. ಒಂದು ವೇಳೆ ಸಂಬಂದಿಕರು ಅವಿವಾಹಿತರೊಡನೆ ಮಾತಾಡಬೇಕೆಂದಲ್ಲಿ ಪೋಷಕರು ತಮ್ಮ ಮೊಬೈಲ್‌ನಲ್ಲಿ ಮಾತಾನಾಡಲು ಅವಕಾಶ ಕಲ್ಪಿಸಿವೆ. ಗ್ರಾಮದಲ್ಲಿ ಒಗ್ಗಟ್ಟು ಮೂಡಿದರೆ ಕುಟುಂಬವನ್ನು ಹೊಡೆಯುವ ಹಾಗು ಕುಟುಂಬಕ್ಕೆ ಹಾನಿಕಾರವಾಗುವ ಇತರೆ ಸಮಸ್ಯೆಗಳನ್ನು ಬಗೆ ಹರಿಸಲು ಅನುಕೂಲವೆಂದು ಠಾಗೂರ್ ಸಮೂಹದ ಮುಖ್ಯಸ್ಥ ರೈಕಾರ್ನ್ಕಿ ರಾಥೋಡ್ ತಿಳಿಸಿದ್ದಾರೆ.



**386ನೇ ಶಿವಾಜಿ ಜಯಂತೋತ್ಸವದಲ್ಲಿ ಸಚಿವೆ ಉಮಾಶ್ರೀ ಶಿವಾಜಿ ಪೋಟೋಗೆ ಪುಷ್ಪ ನಮನ ಸಲ್ಲಿಸಿದರು.**



ಬೆಂಗಳೂರು ಕ್ಲಬ್‌ನಲ್ಲಿ ಹಳೆಯ ಕಾರುಗಳ ಪ್ರದರ್ಶನದಲ್ಲಿ ಬಂದಿದ್ದ ಒಂದು ಕಾರು



ಬೆಂಗಳೂರು ಕೋಟೆಯ ಗೋಡೆಯ ಮೇಲೆ ಕಂಡು ಬರುವ ಮನಮೋಹಕ ಚಿತ್ರ




**ಶ್ರೀ ಲಕ್ಷ್ಮೀ ಮಹಿಳಾ ತರಬೇತಿ ಸಂಸ್ಥೆ**
ಯುವತಿಯರಿಗಾಗಿ ಟೈಲರಿಂಗ್, ಫ್ಯಾಷನ್ ಡಿಸೈನಿಂಗ್,
ಬ್ಯೂಟಿಷಿಯನ್ ಕೋರ್ಸ್ ಕಸೂತಿ ಕೆಲಸ, ಮೆಹೆಂದಿ ಕೋರ್ಸ್‌ಗಳಿಗೆ
ಸಂಪರ್ಕಿಸಿ ಮೊ :9611066634



**ಮಹಿಳಾ ವಿಶೇಷ**
ಕನ್ನಡ ಮಹಿಳಾ ಸುದ್ಧಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)
ಮೈಸೂರು ಕಛೇರಿ : C/o ಜನಶ್ರೀ ಸೋಲಾರ್
ಸಂಖ್ಯೆ : ಸಿ.ಹೆಚ್. 52, 7ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಸರಸ್ವತಿಪುರಂ,
(ಸಿಂಡಿಕೇಟ್ ಬ್ಯಾಂಕ್ ಹಾಗೂ ವಿಜಯಾಬ್ಯಾಂಕ್ ಮಧ್ಯೆ)
ಮೈಸೂರು – 570 009
**ಹೆಚ್.ವಿ. ವೆಂಕಟಸುಬ್ಬರಾವ್, ಸಂಪಾದಕರು 888034444**
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)
Email : mahilavishesha@yahoo.com web : www.mahilavishesha.in


Edited, Published & Owned by H.V.Venkatasubbarao, # 1021, 14th Cross, 2nd Stage, Hebbal, Mysore-570017 and Printed by B.C. Meera and Printed at Annapoorna Offset Printer, # 511, 14th Main, Saraswathipuram, Mysore - 570009 Published at # 1021, 14th Cross, 2nd Stage, Hebbal, Mysore - 570017 Mob.:8880334444, Email:mahilavishesha@yahoo.com Web: www.mahilavishesha.in Editor: H.V. Venkatasubbarao, Decl.No.: MAG.90/2015-16